4) ಬಳ್ಳಾರಿ ನಗರ 9 00 ಘಂಟೆಗಳು (ರಾತ್ರಿ 9 00 ರಿಂದ ಬೆಳಿಗ್ಗೆ 6 00 ರವರೆಗೆ)

5) ಸಂಡೂರು 9 00 ಘಂಟೆಗಳು (ರಾತ್ರಿ 9 00 ರಿಂದ ಬೆಳಿಗ್ಗೆ 6 00 ರವರೆಗೆ)

6) ಕೊಪ್ಪಳ 6 00 ಘಂಟೆಗಳು

ವಾಹನ ಸಂಚಾರ ದಟ್ಟಣೆ ಸಮಯದಲ್ಲಿ ಅಪಘಾತಗಳನ್ನು ನಿರ್ಬಂಧಿಸಲು ಈ ಸಮಯವನ್ನು ನಿಗಧಿಗೊಳಿಸಲಾಗಿದೆ

ಊ ಮತ್ತು ಋ) ಹೌದು, ಪೊಲೀಸ್ ಕಾಯ್ದೆ 1963 ರ ಕಲಂ–31 ಹಾಗೂ ಕೇಂದ್ರ ಮೋಟಾರು ವಾಹನ ಕಾಯ್ದೆ 1988 ರ ಕಲಂ– 115 ರಡಿಯಲ್ಲಿ ಪ್ರದಾತ್ತವಾದ ಅಧಿಕಾರವನ್ನು ಬಳಸಿಕೊಂಡು ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಪ್ರತ್ಯಾಯೋಜಿಸಲ್ಪಟ್ಟ ಪ್ರಾಧಿಕಾರವು ಮ್ಯಾಂಗ್‌ನೀಸ್ ಲಾರಿಗಳ ಸಂಚಾರವನ್ನು ನಿರ್ಬಂಧಿಸುವ ಅಧಿಕಾರವನ್ನು ಆಯಾ ವಿಭಾಗದ ಜಿಲ್ಲಾಧಿಕಾರಿಗಳು ಅಥವಾ ಪೊಲೀಸ್ ಆಯುಕ್ತರುಗಳು ವಾಹನಗಳ ಸಂಚಾರ ದಟ್ಟಣೆ ಮತ್ತು ರಸ್ತೆಗಳು ಹಾಳಾಗುತ್ತಿರುವುದರಿಂದ, ಸಂಚಾರ ನಿಷೇಧವನ್ನು ಜಾರಿಗೊಳಿಸಿರುತ್ತಾರೆ

1451 (1361) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಬೆಂಗಳೂರು ಮೆಟ್ರೋ ರೈಲ್‌ನ್ನು ಅನುಷ್ಠಾನಗೊಳಿಸುವುದಕ್ಕೋಸ್ಕರ ಭೂಮಿ ಮತ್ತು ಕಟ್ಟಡಗಳನ್ನು ಎಷ್ಟು ವಶಪಡಿಸಿಕೊಳ್ಳಲಾಗಿದೆ, ಇದಕ್ಕಾಗಿ ಬೆಂಗಳೂರು ಮೆಟ್ರೋ ರೈಲ್ ಎಷ್ಟು ಸ್ಥಳಗಳನ್ನು ಗುರುತಿಸಲಾಗಿದೆ,

ಬಿ) ಮೆಟ್ರೋ ರೈಲ್ ಎಷ್ಟು ಕಿಲೋ ಮೀಟರ್ ಒಳಗೊಂಡಿರುತ್ತದೆ, ಮತ್ತು ನಿರ್ಮಾಣ ಕೆಲಸದ ಹಂತ (ನಕಾಶೆ ನಕ್ಷೆಯೊಂದಿಗೆ ವಿವರ ನೀಡುವುದು)?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಎ) ಬೆಂಗಳೂರು ಮೆಟ್ರೋ ರೈಲ್ ಅನುಷ್ಠಾನಗೊಳಿಸಲು, 676 ಸ್ಥಳಗಳನ್ನು ಭೂಸ್ವಾಧಿನಕ್ಕೆ ಗುರುತಿಸಲಾಗಿದೆ

1) ಖಾಸಗಿ ಆಸ್ತಿಗಳು – 621

2) ರಾಜ್ಯ ಸರ್ಕಾರದ ಆಸ್ತಿಗಳು – 46

3) ಕೇಂದ್ರ ಸರ್ಕಾರದ ಆಸ್ತಿಗಳು – 9

ಬಿ) ಮೆಟ್ರೋ ರೈಲ್ ಮೊದಲನೇ ಹಂತದಲ್ಲಿ 33 ಕಿ ಮೀ ಹೊಂದಿರುತ್ತದೆ ನಿರ್ಮಾಣ ಕೆಲಸದ ಹಂತ ಈ ಕೆಳಕಂಡಂತಿರುತ್ತದೆ

ರೀಚ್–1 ಪೂರ್ವ ಪಶ್ಚಿಮ ಎತ್ತರಿಸಿದ ಮಾರ್ಗ 7 ಕಿ ಮೀ,

ಪೂರ್ವ ಭಾಗ – ಬೈಯಪ್ಪನಹಳ್ಳಿಯಿಂದ ಕ್ರಿಕೇಟ್ ಸ್ಟೇಡಿಯಂವರೆಗೆ,

ರೀಚ್–2 ಪೂರ್ವ ಪಶ್ಚಿಮ ಎತ್ತರಿಸಿದ ಮಾರ್ಗ 7 45 ಕಿ ಮೀ,

ಪಶ್ಚಿಮ ಭಾಗ – ಸಿಟಿ ರೈಲ್ವೆ ಸ್ಟೇಶನ್‌ನಿಂದ ಮೈಸೂರು ರಸ್ತೆವರೆಗೆ

ರೀಚ್–3 ಉತ್ತರ ದಕ್ಷಿಣ ಎತ್ತರಿಸಿದ ಮಾರ್ಗ 6 7 ಕಿ ಮೀ,

ಉತ್ತರ ಭಾಗ – ಯಶವಂತಪುರದಿಂದ ಸ್ವಸ್ತಿಕ್‌ರವರೆಗೆ

ರೀಚ್–4 ಉತ್ತರ ದಕ್ಷಿಣ ಎತ್ತರಿಸಿದ ಮಾರ್ಗ 5 15 ಕಿ ಮೀ,

ದಕ್ಷಿಣ ಭಾಗ – ಸಿಟಿ ಮಾರ್ಕೆಟ್‌ನಿಂದ ಆರ್ ವಿ ರಸ್ತೆಯವರೆಗೆ

ರೀಚ್–5 ಪೂರ್ವ ಪಶ್ಚಿಮ ಮತ್ತು ಉತ್ತರ ಭಾಗದ ಸುರಂಗ ಮಾರ್ಗ 6 7 ಕಿ ಮೀ, ಕ್ರಿಕೇಟ್ ಸ್ಟೆಡಿಯಂನಿಂದ ಸಿಟಿ ರೈಲ್ವೆ ಸ್ಟೇಶನ್ ಹಾಗೂ ಸ್ವಸಿಕ್‌ನಿಂದ ಸಿಟಿ ಮಾರುಕಟ್ಟೆವರೆಗೆ (ನಕ್ಷೆ ಲಗತ್ತಿಸಲಾಗಿದೆ)


Namma Metro - Phase I
PEENYA
DABARAHALLI
OGR
YESHWANTHPUR
SOAP FACTORY
MAHALAKSHMI LAYOUT
RAJAJINAGAR
KUVEMPU ROAD
MALLESWARAM
SWASTIK
MAGADI ROAD
CITY RLY STATION
CENTRAL COLLEGE
CRICKET STADIUM
TRINITY CIRCLE
OLD MADRAS ROAD
B HALLI TERMINAL
CMH ROAD
ULSOOR
HOSAHALLI
TOLL GATE
MAJESTIC
VIDHANA SOUDHA
M G ROAD
CHICKPET
CITY MARKET
VIJAYANAGAR
K R ROAD
DEEPANJALI NAGAR
LALBAGH
MYSORE ROAD TERMINAL
SOUTH END CIRCLE
JAYNAGAR
R V ROAD TERMINAL
Elevated
Under Ground
At Grade
Huge Parking Lots

ಅ) ಬೆಂಗಳೂರಿನ ಕೆ ಆರ್ ಪುರಂ, ಕೇಬಲ್ ಬ್ರಿಡ್ಜ್ ಹತ್ತಿರ ಟಿನ್ ಫ್ಯಾಕ್ಟರಿ ಬಳಿ ಉದಯನಗರ, ಶಕ್ತಿನಗರ, ಬಿ ನಾರಾಯಣ ಪುರದ ವಾಸಿಗಳು ಒಂದು ರಸ್ತೆಯಿಂದ ಇನ್ನೊಂದು ರಸ್ತೆಗೆ ದಾಟಲು ಕಷ್ಟ ಪಡುತ್ತಿರುವುದು ಮತ್ತು ಇದರಿಂದ ಅಪಘಾತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಕೆ ಆರ್ ಪುರಂ, ಕೇಬಲ್ ಬ್ರಿಡ್ಜ್ ಹತ್ತಿರ ರಸ್ತೆಯ ಎರಡೂ ಬದಿ ಪಾದಚಾರಿ ಮೇಲು ಸೇತುವೆಯನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ, ಇಲ್ಲದಿದ್ದಲ್ಲಿ, ಸಾವಿರಾರು ಮಂದಿ ಜನರು ರಕ್ಷಣೆ ಇಲ್ಲದೆ ಉಸಿರನ್ನು ಹಿಡಿದುಕೊಂಡು ರಸ್ತೆಯನ್ನು ದಾಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ತೊಂದರೆಯನ್ನು ನಿವಾರಿಸಲು ಬದಲಿ ವ್ಯವಸ್ಥೆಯನ್ನು ಮಾಡುವ ಬಗ್ಗೆ ನಗರ ಸಭೆ, ಬಿಡಿಎ, ಬೆಂಗಳೂರು ಮಹಾನಗರ ಪಾಳಿಕೆ ಅಥವಾ ಇತರೆ ಸರ್ಕಾರಿ ಸಂಸ್ಥೆಗಳಿಗೆ ಕೆಲಸವನ್ನು ವಹಿಸುವ ಪ್ರಸ್ತಾವನೆ ಇದೆಯೇ,

ಈ) ಇಲ್ಲದಿದ್ದಲ್ಲಿ, ಯೋಜನೆಯ ವೆಚ್ಚವನ್ನು ಶಾಸಕ ಪ್ರದೇಶ ಅಭಿವೃದ್ಧಿ ಹಣದಿಂದ ಭರಿಸಬಹುದೇ,

ಉ) ಪಾದಚಾರಿ ಮೇಲು ಸೇತುವೆಯನ್ನು ತಮ್ಮ ಸ್ವಂತ ಖರ್ಚಿನಿಂದಲೇ ನಿರ್ಮಿಸಲು ಮುಂದೆ ಬರುವ ಖಾಸಗಿ ವ್ಯಕ್ತಿಗಳಿಗೆ ನೀಡುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ,

ಊ) ಇದ್ದಲ್ಲಿ, ಮಾನದಂಡಗಳೇನು ಮತ್ತು ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ & ಆ) ಹೌದು ಕೆ ಆರ್ ಪುರಂ ಟಿನ್ ಫ್ಯಾಕ್ಟರಿ ಹತ್ತಿರ ಪಾದಚಾರಿ ಮೇಲು ಸೇತುವೆ ಅಳವಡಿಸಲು ಉದ್ದೇಶಿಸಲಾಗಿರುತ್ತದೆ

ಇ) ಸದರಿ ಯೋಜನೆಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿ ಪಿ ಪಿ) ದಿ–ಬೂಟ್ (Design, Build, Operate and Transfer) ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗುತ್ತಿದೆ

ಈ) ಈ ಸಂಬಂಧದಲ್ಲಿ ಖಾಸಗಿ ಎಜೆನ್ಸಿಗಳಿಂದ ಈಗಾಗಲೇ ಎಕ್ಸ್‌ಪ್ರೆಶನ್ ಆಫ್ ಇನ್‌ಟ್ರಸ್ಟ್ ಗಳಿಗಾಗಿ ಕರೆಯಲಾಗಿದ್ದು, ಸದರಿ ಕಾರ್ಯ ಪ್ರಗತಿಯಲ್ಲಿರುತ್ತದೆ

ಉ & ಊ) ಸದರಿ ಯೋಜನೆಯನ್ನು ದಿ-ಬೂಟ್ ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗುತ್ತಿರುವುದರಿಂದ ಖಾಸಗಿಯವರು ನಿರ್ಮಾಣ ಮತ್ತು ನಿರ್ವಹಣೆ ಮಾಡುವುದರಿಂದ ಸ್ಥಳೀಯ ಶಾಸಕರ ನಿಧಿಯಿಂದ ಕೈಗೆತ್ತಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ

1453 (1686) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಗಾಂಧಿನಗರದಲ್ಲಿರುವ ಮಾರಾಟ ತೆರಿಗೆ ಆಯುಕ್ತರ ಹಾಗೂ ಇತರೆ ಸರ್ಕಾರಿ ಕಛೇರಿಗಳು ಶಿಥಿಲಗೊಂಡಿರುವ ಕಟ್ಟಡವಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಗಮನಕ್ಕೆ ಬಂದಿದ್ದರೆ ಇಂತಹ ಸರ್ಕಾರಿ ಕಟ್ಟಡಗಳ ನಿರ್ವಹಣೆ ಜವಾಬ್ದಾರಿ ಯಾರ ವ್ಯಾಪ್ತಿಗೆ ಬರುತ್ತದೆ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಂಗಳೂರು ನಗರದ ಗಾಂಧಿನಗರದಲ್ಲಿರುವ ಮಾರಾಟ ತೆರಿಗೆ ಆಯುಕ್ತರ ಹಾಗೂ ಇತರೆ ಸರ್ಕಾರಿ ಕಛೇರಿಗಳು ಖಾಸಗಿ ಕಟ್ಟಡದಲ್ಲಿ ಬಾಡಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು ಸದರಿ ಕಟ್ಟಡದ ದುರಸ್ತಿಯು ಕಟ್ಟಡದ ಮಾಲೀಕರಿಗೆ ಸಂಬಂಧಿಸಿರುತ್ತದೆ

ಗಾಂಧಿನಗರದ ಕೆಂಪೇಗೌಡ ರಸ್ತೆಯಲ್ಲಿ ವಾಣಿಜ್ಯ ತೆರಿಗೆ ಕಛೇರಿಯು ಸರ್ಕಾರಿ ಬಹುಮಹಡಿ ಕಟ್ಟಡದಲ್ಲಿದ್ದು ಸದರಿ ಸರ್ಕಾರಿ ಕಟ್ಟಡ ಸುಸ್ಥಿತಿಯಲ್ಲಿರುತ್ತದೆ

ಆ) ಮಾರಾಟ ತೆರಿಗೆ ಆಯುಕ್ತರ ಹಾಗೂ ಇತರೆ ಸರ್ಕಾರಿ ಕಛೇರಿಗಳಿರುವ ಕಟ್ಟಡವು ಖಾಸಗಿಯವರಿಗೆ ಸೇರಿದ್ದು ಕಟ್ಟಡದ ನಿರ್ವಹಣೆಯ ಜವಾಬ್ದಾರಿಯು ಕಟ್ಟಡದ ಮಾಲೀಕರ ವ್ಯಾಪ್ತಿಗೆ ಬರುತ್ತದೆ